ಟಿ.ಸಿ.ಹೆಚ್. ಮಾಡಿದ ವಿದ್ಯಾರ್ಥಿಗಳು ಸಿಕ್ಕದೇ ಇದ್ದಾಗ ಒಂದು ಪಕ್ಷ ಪಿಯುಸಿ ಮಾಡಿದಂಥವರನ್ನು ಶಿಕ್ಷಕರಾಗಿ ನೇಮಕ ಮಾಡಿ ನಂತರ ಟಿ.ಸಿ ಹೆಚ್.ಗೆ ಕಳಿಸತಕ್ಕ ವ್ಯವಸ್ಥೆಯನ್ನು ಬೇಕಾದರೆ ಪರಿಶೀಲನೆ ಮಾಡಬಹುದು. ಒಟ್ಟಿನಲ್ಲಿ ಈ ವರ್ಗದ ವಿದ್ಯಾರ್ಥಿಗಳಿಗೆ ಯಾವುದೇ ರೀತಿ ಶಿಕ್ಷಕರ ಹುದ್ದೆಯನ್ನು ತಪ್ಪಿಸುವ ದೃಷ್ಟಿಯಲ್ಲ. ಅವರನ್ನು ಮೀಸಲಾತಿ ಪದ್ಧತಿಯಂತೆ ತುಂಬೇ ತುಂಬುತ್ತೇವೆ. ಯಾವುದೇ ರೀತಿಯಲ್ಲಾದರೂ ಕೆಲವು ನಿಯಮಗಳನ್ನು ರಿಲ್ಯಾಕ್ಸ್ ಆದರೂ ಮಾಡಿ ತುಂಬುತ್ತೇವೆ. ಆದುದರಿಂದ ಅವರು ಏನೂ ಅನುಮಾನ ಪಡಬೇಕಾದ್ದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಗಿದ್ದರೆ ಪಿ.ಯು.ಸಿ. ಸೈನ್ಸ್‌ನಲ್ಲಿ ಸೆಕೆಂಡ್ ಇಯರ್ ಪಾಸ್ ಆಗಿರತಕ್ಕ ವಿದ್ಯಾರ್ಥಿಗಳ ಸಂಖ್ಯೆಯನ್ನು ತಾವು ಹೇಳಿ.

ಶ್ರೀ ಬಿ. ಸೋಮಶೇಖರ್.—ಪಿಯುಸಿ ಪಾಸ್ ಮಾಡಿದಂಥ ಸೈನ್ಸ್ ವಿದ್ಯಾರ್ಥಿಗಳು ಅಲ್ಲಿ ಹೋಗುವುದರ ಬದಲು ಇಲ್ಲಿ ಬರಲಿ. ಇಲ್ಲಿ ಫರ್ಸ್ಟ್ ಡಿವಿಜನ್ ಸ್ಕೇಲ್ ಸಿಗುತ್ತದೆ, ಒಳ್ಳೆಯ ಸಂಬಳ ಸಿಗುತ್ತದೆ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಳ್ಳೆಯ ಸಂಬಳ ಸಿಗುತ್ತಿದೆ. ಇದು ಉತ್ತಮವಾದಂಥ ಹುದ್ದೆ. ಇದಕ್ಕೆ ಏಕೆ ಬರಬಾರದು. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ಕೊಡುವಂಥ ದೃಷ್ಟಿಯಿಂದ ಇದನ್ನು ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪಿ.ಯು.ಸಿ.ಯಲ್ಲಿ ೩ ಕ್ಯಾಟಗರಿ ಬರುತ್ತದೆ. ಒಂದನೆಯದು ಆರ್ಟ್ಸ್, ಎರಡನೆಯದು ಕಾಮರ್ಸ್ ಮತ್ತು ಮೂರನೆಯದು ಸೈನ್ಸ್. ನಾಳೆ ರೆಕ್ರೂಟ್‌ಮೆಂಟ್ ಮಾಡುವಾಗ ಗುಣಪಂಟ್ಟ ಚೆನ್ನಾಗಿರಬೇಕು ಎಂದು ಪಿಯುಸಿ ಸೈನ್ಸ್ ಪಾಸಾದವರಿಗೆ ಕೆಲವು ಹುದ್ದೆಗಳನ್ನು ರಿಸರ್ವ್ ಮಾಡಬಹುದು ಎಂದು ನಿಯಮ ಬರಬಹುದು ಏಕೆಂದರೆ, ಸೈನ್ಸ್ ಕಲಿಸಲಿಕ್ಕೆ ಅಂಥವರೇ ಬರಬೇಕು ಎಂದು. ಅದೂ ಕೂಡ ನೆಕ್ಸ್ಟ್ ಸ್ಟೆಪ್ ಬರುತ್ತದೆ. ಆಗ ಏನಾಗುತ್ತದೆಯೆಂದರೆ, ನಿಮಗೆ ಗೊತ್ತಿದ್ದಂತೆ ರಿಸರ್ವೇಷನ್‌ನಲ್ಲಿ ಸೈನ್ಸ್‌ನಲ್ಲಿ ಪಾಸಾಗತಕ್ಕಂಥವರು ಒಂದು ಹತ್ತು ಪರ್ಸೆಂಟ್ ಹುಡುಗರೂ ಕೂಡ ಸಿಕ್ಕುವುದಿಲ್ಲ. ಸ್ವಲ್ಪ ಇದೆಲ್ಲಾ ಕ್ಲಬ್ ಮಾಡಿ ನಿಮಗೆ ಹೇಳುತ್ತೇನೆ. ಆದ್ದರಿಂದ ನೀವು ಅಂಕಿಸಂಖ್ಯೆ ತರಿಸಿಕೊಂಡು ಇನ್ನೊಮ್ಮೆ ಯೋಚನೆಮಾಡಿ, ನೀವು ಆ ಜನರಿಗೆ ಸಹಾಯ ಮಾಡಬೇಕು ಅಂದರೆ you collect the facts and figures, then you go ahead.

ಶ್ರೀ ಬಿ. ಸೋಮಶೇಖರ್.—ನಿಮ್ಮ ಅನುಮಾನಕ್ಕೆ ಆಸ್ಪದವಿಲ್ಲ. ಕಾರಣ, 50% of the TTI seats should be reserved for science section ಎಂದು ಇದೆ. ಆದರಲ್ಲಿ ಸೈನ್ಸ್‌ನಲ್ಲಿ ರಿಸರ್ವೇಷನ್ ಇರುತ್ತಾರೆ. ಎಂಬ ಅನುಮಾನ ಅವರು ಪಡುತ್ತಿದ್ದರೆ ಅದು ಇರುವುದಿಲ್ಲ. ಒಟ್ಟಿನಲ್ಲಿ ೫೦ ಪರ್ಸೆಂಟ್ ಯಾವುದೇ ವರ್ಗದಿಂದ ಬಂದಿರಲಿ, ಅದನ್ನು ಸೈನ್ಸ್‌ನಲ್ಲಿ ಇಟ್ಟಿರಂತ್ತೇವೆ. ಇನ್ನು ಇರತಕ್ಕಂಥ ಸೀಟ್ಸ್‌ನಲ್ಲಿ ೧೮ ಪರ್ಸೆಂಟ್ ಈ ವ್ಯಕ್ತಿಗಳಿಗೆ ಕೊಟ್ಟೇ ಕೊಡುತ್ತೇವೆ.

ಶಿಕ್ಷಣಾಧಿಕಾರಿಗಳ ಖಾಲಿ ಹುದ್ದೆಗಳು

೧೫೧೮. ಶ್ರೀ ಎನ್. ಎಚ್. ಗೌಡ (ಕುಪಟಾ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಮಟ್ಟದ ಶಿಕ್ಷಣಾಧಿಕಾರಿಗಳ ಖಾಲಿಯಿರುವ (ಇ.ಒ) ಹುದ್ದೆಗಳ ಸಂಖ್ಯೆ ಎಷ್ಟು ?

(ಆ) ಆ ಹುದ್ದೆಗಳನ್ನು ತುಂಬಲು ಸರ್ಕಾರವು ಕ್ರಮಕೈಗೊಳ್ಳುವುದೆ ?

(ಇ) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

(ಅ) ೭೨

(ಆ) ಹೌದು

(ಇ) ಶೀಘ್ರವಾಗಿ ತುಂಬಲಾಗುವುದು.

ಶ್ರೀ ಎನ್. ಹೆಚ್. ಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದಿಂದ ನನಗೆ ಸಾಮಾನ್ಯವಾಗಿ ತೃಪ್ತಿಯಾಗಿದೆ. ಆದರೂ ಕರ್ನಾಟಕ ರಾಜ್ಯದಲ್ಲಿ ೭೮ ಜಿಲ್ಲಾವಂಟ್ಟದ ಶಿಕ್ಷಣಾಧಿಕಾರಿಗಳ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಈ ಹುದ್ದೆಗಳು ಎಷ್ಟು ಕಾಲದಿಂದ ಖಾಲಿ ಇವೆ ಎಂದು ಮಾನ್ಯ ಮಂತ್ರಿಗಳನ್ನು ತವಥ್ಥ ಮುಖಾಂತರ ಕೇಳುತ್ತಾ ಇದ್ದೇನೆ.

ಶ್ರೀ ಬಿ. ಸೋಮಶೇಖರ್. – ಎಷ್ಟು ಕಾಲದಿಂದ ಖಾಲಿ ಇವೆ ಎಂದು ನಿಗದಿತವಾಗಿ ಕಾಲವನ್ನು ಹೇಳುವುದಕ್ಕೆ ಸಾಧ್ಯವಿಲ್ಲ, ಬಹಳ ದಿನಗಳಿಂದ ಖಾಲಿ ಇವೆ. ಶೀಘ್ರದಲ್ಲೇ ಅದನ್ನು ತುಂಬತಕ್ಕ ವ್ಯವಸ್ಥೆ ಮಾಡುತ್ತಾ ಇದ್ದೇವೆ. ಆದ್ದರಿಂದ ಅವರು ಏನೂ ಆನಂಮಾನ ಪಡಬೇಕಾದ್ದಿಲ್ಲ.

ಶ್ರೀ ಎನ್. ಎಚ್. ಗೌಡ.—ನಿಜವಾಗಿ ಶಿಕ್ಷಣ ಎನ್ನುವುದು ಬಹಳ ದೊಡ್ಡದು, ಅದು ಮಾನವನ ಅನುಭವದ ಅಮರಗಂಗೆ. ಶಿಕ್ಷಣವೇ ಜೀವನ, ಜೀವನವೇ ಶಿಕ್ಷಣ ಎಂದು ತಜ್ಞರು ಹೇಳಿದ್ದಾರೆ. ಆದುದರಿಂದ ಈ ಶಿಕ್ಷಣ ಕ್ಷೇತ್ರದಲ್ಲಿ ಯಾವುದೇ ಒಂದು ಭಾಗದಲ್ಲಿ ಹೊಡೆತ ಬಿದ್ದರೂ ಕೂಡ ಅದು ಮಾನವನ ಬದುಕಿಗೆ ಮತ್ತು ಸಂಸ್ಕೃತಿಗೆ ದೊಡ್ಡ ಹೊಡೆತ, ಆದುದರಿಂದ ಈ ರೀತಿ ಅಧಿಕಾರಿಗಳ ಹುದ್ದೆ ಖಾಲಿ ಇದ್ದರೆ ಆಗಂವಂಥ ಅನಾಹುತ ಹೆಚ್ಚು ಎಂದು ನನಗನ್ನಿಸುತ್ತದೆ. ಮಾನ್ಯ ಸಚಿವರು ಆದಷ್ಟು ಬೇಗ ಈ ಹುದ್ದೆಗಳನ್ನು ತುಂಬುತ್ತೇವೆ ಎಂದು ಹೇಳಿದ್ದಾರೆ. ಒಂದು ವಾರದಲ್ಲಿ ಈ ಕೆಲಸವನ್ನು ತಾವು ಪೂರ್ತಿಗೊಳಿಸುತ್ತೀರಾ ?

ಶ್ರೀ ಬಿ. ಸೋಮಶೇಖರ್.—೧೫ ದಿವಸದೊಳಗೆ ಈ ಕೆಲಸವನ್ನು ಮುಗಿಸುತ್ತೇನೆ.

ಶ್ರೀ ಎನ್. ಹೆಚ್. ಗೌಡ.—ಹಾಗಿದ್ದರೆ ಸಚಿವರಿಗೆ ಕೃತಜ್ಞತೆಗಳು.

ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಬೋಧಕರ ಹಾಗೂ ಬೋಧಕೇತರರ ಖಾಲಿ ಹುದ್ದೆಗಳು

೧೯೩೪. ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ).—ಮಾನ್ಯ ಪ್ರಾಥಮಿಕ ಹಾಗೂ ಸಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕ ರಾಜ್ಯದ ಪ್ರೌಢ ಹಾಗೂ ಪ್ರಾಥಮಿಕ (ಸರ್ಕಾರಿ) ಶಾಲೆಗಳಲ್ಲಿ ಶಿಕ್ಷಕರ ಹಾಗೂ ಇತರೆ ಖಾಲಿ ಇರುವ ಹುದ್ದೆಗಳ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ/ಹಾಗಿದ್ದಲ್ಲಿ, ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

(ಆ) ಹಾಗಿದ್ದಲ್ಲಿ ಭರ್ತಿ ಯಾವಾಗ ಮಾಡಲಾಗುವುದು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

(ಅ) ಹೌದು, ಖಾಲಿ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಸಮಿತಿಗಳನ್ನು ರಚಿಸಲಾಗಿದೆ. ಹಲವು ನೇಮಕಾತಿ ಸಮಿತಿಗಳು ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ನೀಡಿವೆ.

(ಆ) ಖಾಲಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಿಂದ ದಿನಾಂಕ ೨೦-೫-೧೯೮೮ ರಲ್ಲಿ ಆದೇಶ ಹೊರಡಿಸಲಾಗಿದೆ.

೧೧-೩೦ ಎ.ಎಂ.

ಶ್ರೀ ಕೆ. ವಸಂತ ಬಂಗೇರ.—ರಾಜ್ಯದ ಕೆಲವು ಪ್ರಾಥಮಿಕ ಶಾಲೆಗಳಲ್ಲಿ ೧ನೇ ತರಗತಿಯಿಂದ ೫ನೆಯ ತರಗತಿಯವರೆಗೆ ಒಬ್ಬರೇ ಉಪಾಧ್ಯಾಯರು ಇದ್ದಾರೆ. ಏಕ ಉಪಾಧ್ಯಾಯರ ಶಾಲೆ, ಮುಖ್ಯ ಉಪಾಧ್ಯಾಯರು ಎಂದು ಬೋರ್ಡ್ ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಇವರು ಸುಮಾರು ೧೫೦ ವಿದ್ಯಾರ್ಥಿಗಳಿಗೂ ಮಿಕ್ಕಿ, ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ನೀಡಬೇಕಾಗಿದೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಎಷ್ಟು